ಬಾಡಿಗೆ ಮನೆ ಮಾಡಿ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿರುವಾಗ ಗೋಡೆಗಳ ಮಾತು ಗಂಗಾಧರನ ಬದುಕಿನ ಗತಿಯನ್ನೇ ಬದಲಿಸಿತು.

***

ಗೋಡೆಗಳ ಮಾತು ಕೇಳಿದ ದಿನದಿಂದ ಗಂಗಾಧರನಿಗೆ ಲಾಡ್ಜಿನ ರೂಮು ಖಾಲಿಯಾದದ್ದೆ ತಡ ರೂಮ್ ಬಾಯ್ ಕೋಣೆಯನ್ನು ಸ್ವಚ್ಛಗೊಳಿಸುವುದಕ್ಕಿಂತ ಮೊದಲು ಅರೆಘಳಿಗೆ ಆ ಕೋಣೆಯ ಮಂಚದ ಮೇಲೆ ಮಲಗುವ ಹೊಸ ಖಯಾಲಿ ಶುರುವಾಯಿತು. ಹೀಗೆ ಹತ್ತಾರು ಕೋಣೆಗಳನ್ನು ಸುತ್ತಾಡಿದರೂ ಆ ಹನ್ನೊಂದನೇ ನಂಬರಿನ ಕೋಣೆಯಲ್ಲಿ ಆದ ಅನುಭವ ಗಂಗಾಧರನಿಗೆ ಬೇರೆ ಯಾವ ಕೋಣೆಯಲ್ಲೂ ಆಗಲಿಲ್ಲ. ಈ ವಿಚಿತ್ರ ಸಂದಿಗ್ಧದಲ್ಲಿ ತೊಳಲಾಡುತ್ತ ಅದೊಂದು ದಿನ ಬೆಳಗ್ಗೆ ಕೆಲಸಕ್ಕೆ ಹಾಜರಾದವನಿಗೆ ಹನ್ನೊಂದನೇ ನಂಬರಿನ ಕೋಣೆಯನ್ನು ಖಾಲಿ ಮಾಡಿ ಹೊರಹೋಗುತ್ತಿದ್ದ ಜೋಡಿಯೊಂದು ಕಣ್ಣಿಗೆ ಬಿತ್ತು. ಅವಸರವಸರದಿಂದ ಕೋಣೆಯನ್ನು ಪ್ರವೇಶಿಸಿದವನು ಬಾಗಿಲು ಮುಚ್ಚಿ ಬೋಲ್ಟ್ ಹಾಕಿ ಮಂಚದ ಮೇಲೆ ಮಲಗಿದ. ಇಡೀ ಮೈಯನ್ನು ಕಿವಿಯಾಗಿಸಿಕೊಂಡು ಉಸಿರು ಬಿಗಿ ಹಿಡಿದು ಮಲಗಿದವನು ಗೋಡೆಗಳ ಮಾತುಗಳಿಗಾಗಿ ಕ್ಷಣವನ್ನು ಯುಗವಾಗಿಸಿ ಕಾಯತೊಡಗಿದ. ಹೃದಯದ ಬಡಿತ ಕಿವಿಗೆ ಸ್ಪಷ್ಟವಾಗಿ ಕೇಳಿಸುವಷ್ಟು ಆ ಕೋಣೆಯಲ್ಲಿ ನಿಶ್ಶಬ್ದ ಮನೆ ಮಾಡಿತ್ತು. ಆಗ ನಕ್ಕಿತು ಕಿಲಕಿಲನೆ ಬಾಗಿಲಿರುವ ಗೋಡೆ. ನಗುವಿಗೆ ಕಾರಣ ಕೇಳಿತು ಎರಡನೇ ಗೋಡೆ. 'ನೀನೆ ನನ್ನ ಹೃದಯದ ರಾಜಾ ಅಂತಿದ್ದಳು. ಅವನು ಬಾತ್‌ರೂಮಿಗೆ ಹೋದ ತಕ್ಷಣ ತನ್ನ ಬಾಯ್‌ಫ್ರೆಂಡ್‌ಗೆ ಫೋನ್ ಮಾಡಿ ಲಲ್ಲೆ ಹೊಡಿತಿದ್ದಳು. ಪೆಕರು ಮುಂಡೆದು ಗಂಡಸಿಗೆ ಬುದ್ಧಿನೆ ಇಲ್ಲ' ಗಹಗಹಿಸಿ ನಕ್ಕಿತು ಗೋಡೆ. 'ಪೆಕರು ಮುಂಡೆದು ಅವನಲ್ಲ. ಬಾತ್‌ರೂಮ್ ಒಳಗಡೆ ಬಂದು ಅವನು ತನ್ನ ಹೆಂಡತಿಗೆ ಚಿನ್ನಾ ನಾನು ಬಿಜಿನೆಸ್ ಮೀಟಿಂಗ್‌ನಲ್ಲಿದ್ದರೂ ನಿನ್ನದೆ ನೆನಪು ಮನಸ್ಸು ತುಂಬಿಕೊಂಡಿದೆ ನೋಡು ಎಂದು ಫೋನಿಗೆ ಲೊಚಲೊಚ ಅಂತ ಮುತ್ತಿಡ್ತಿದ್ದ' ಎಂದಿತು ಬಾತ್‌ರೂಮ್ ಗೋಡೆ. 'ಅಯ್ಯೋ ಈ ಮನುಷ್ಯರನ್ನು ನಂಬಲೇ ಬಾರದು. ಯಾವ ಹುತ್ತದಲ್ಲಿ ಎಂಥ ಹಾವಿದೆಯೋ ಯಾರಿಗೆ ಗೊತ್ತು' ಎಂದು ನಿಟ್ಟುಸಿರಿಟ್ಟಿತು ಮೂರನೇ ಗೋಡೆ. ಅಲ್ಲಿಗೆ ಗೋಡೆಗಳ ಸಂಭಾಷಣೆ ಮುಗಿದಿತ್ತು. ಮಲಗಿದ್ದ ಗಂಗಾಧರನ ಮೈ ಬೆವರಿನಿಂದ ತೋಯ್ದು ಹೋಗಿತ್ತು. ಮನೆಯಲ್ಲಿದ್ದ ಹೆಂಡತಿ ನೆನಪಾಗಿ ಧುತ್ತನೆ ಮಂಚದಿಂದ ಮೇಲೆದ್ದು ಕೋಣೆಯಿಂದ ಹೊರಬಂದು ಮನೆಯತ್ತ ಓಡತೊಡಗಿದ.

ಒಂದುಗಂಟೆ ಹಿಂದಷ್ಟೆ ಕೆಲಸಕ್ಕೆಂದು ಹೋಗಿದ್ದ ಗಂಡ ಇಷ್ಟು ಬೇಗನೆ ಮನೆಗೆ ಬಂದಿದ್ದು ನೋಡಿ ಕಮಲಾಕ್ಷಿಗೆ ಅಚ್ಚರಿಯಾಯಿತು. ಗಂಗಾಧರ ಹೆಂಡತಿ ಜೊತೆ



ಮಾತನಾಡದೆ ನೇರವಾಗಿ ಬೆಡ್‌ರೂಮಿಗೆ ಹೋಗಿ ನೋಡಿದ. ಬಾತ್‌ರೂಮ್‌ನ ಕದತೆರೆದು ಹಣಿಕ್ಕಿದ. ಮನೆಯ ಒಳಗೆ ಮತ್ತು ಹೊರಗೆ ಸುತ್ತಾಡಿದ. ಮರಳಿ ಬೆಡ್‌ರೂಮಿಗೆ ಬಂದು ಮಂಚದ ಮೇಲೆ ಮಲಗಿದವನು ಕೋಣೆಯ ನಾಲ್ಕೂ ಗೋಡೆಗಳನ್ನು ಗಳಿಗೆಗೊಮ್ಮೆ ದೃಷ್ಟಿ ಬದಲಿಸುತ್ತ ಒಂದಾದ ಮೇಲೊಂದರಂತೆ ದಿಟ್ಟಿಸಿ ನೋಡತೊಡಗಿದ. ಕೋಣೆಯ ಬಾಗಿಲ ಹತ್ತಿರ ನಿಂತು ಗಂಡನ ಚಲನವಲನಗಳನ್ನು ಅಚ್ಚರಿಯಿಂದ ವೀಕ್ಷಿಸುತ್ತಿದ್ದ ಕಮಲಾಕ್ಷಿಗೆ ಗಂಗಾಧರನ ಇವತ್ತಿನ